ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ. ಅಳಿಕೆ ಗ್ರಾಮಾಂತರ ನೀರು ಸರಬರಾಜು ಯೋಜನೆಯನ್ನು 1978ರಲ್ಲಿ ಪೂರ್ತಿಗೊಳಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ವಹಿಸಿಕೊಡಲಾಯಿತು. ಈ ಪಂಚಾಯತಿಯಿಂದ ಸಾರ್ವಜನಿಕರಿಗೂ ಹಾಗೂ ಅಳಿಕೆ ಲೋಕ ಸೇವ ವೃಂದದವರು ನಡೆಸುತ್ತಿರುವ ಸಂಸ್ಥೆಗಳಿಗೂ ನೀರನ್ನು ಪೂರೈಸಲಾಗುತ್ತಿದೆ.

ಆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಪ್ರತಿ ವ್ಯಕ್ತಿಗೆ 50 ಎಲ್‌ಪಿಸಿಡಿ ನೀರು ಒದಗಿಸುವ ಕಾರ್ಯಕ್ರಮವಿರುವುದರಿಂದ ಈಗಿನ ಜನಸಂಖ್ಯೆಗೆ ಸಾಕಷ್ಟು ನೀರು ಪೂರೈಸುವ ಉದ್ದೇಶದಿಂದ ಈ ಗ್ರಾಮಕ್ಕೆ ಅಭಿವೃದ್ಧಿ ನೀರು ಸರಬರಾಜು ಯೋಜನೆಯನ್ನು 1982—83ರಲ್ಲಿ ಸರ್ಕಾರವು ಮಂಜೂರು ಮಾಡಿರುತ್ತದೆ. ಅವಶ್ಯಕತೆ ಮತ್ತು ಆನುಭಾವಗಳ ಲಭ್ಯಗಳನ್ನು ಅವಲಂಬಿಸಿ ಮುಂಬರುವ ಯೋಜನೆಗಳಲ್ಲಿ ಈ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಚಿಸಲಾಗುತ್ತಿದೆ.

ವಿಷಯ :— ಹಳೆ ಮೈಸೂರು ರಾಜ್ಯ ಹಾಗೂ ಬಾಂಬೆ ಕರ್ನಾಟಕದಲ್ಲಿರುವ ಸರಕಾರಿ ಕಾಲೇಜುಗಳು

ಪ್ರ. 845(1396) ಡಾ॥ ಹೆಗ್ಗಪ್ಪ (ಬ್ಯಾಡಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ಹಳೇ ಮೈಸೂರು ರಾಜ್ಯದಲ್ಲಿರುವ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ;

ಆ. ಬಾಂಬೆ ಕರ್ನಾಟಕದಲ್ಲಿರುವ ಸರಕಾರಿ ಕಾಲೇಜುಗಳ ಸಂಖ್ಯೆ ಎಷ್ಟು ;

ಇ. ಈ ತಾರತಮ್ಯಕ್ಕೆ ಕಾರಣಗಳೇನಾದರೂ ಇವೆಯೇ ;

ಈ ಈ ತಾರತಮ್ಯವನ್ನು ಹೋಗಲಾಡಿಸಲು ಬಾಂಬೆ ಕರ್ನಾಟಕದಲ್ಲಿ ಸರಕಾರಿ ಕಾಲೇಜುಗಳನ್ನು ಸ್ಥಾಪಿಸಲಾಗುವುದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :—

ಅ. 29

ಆ. 3

ಇ. ಈ ಪ್ರದೇಶದಲ್ಲಿ ಮೊದಲಿನಿಂದಲೂ ಖಾಸಗೀ ಸಂಸ್ಥೆಗಳು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತ ಬಂದಿರುವುದರಿಂದ ಖಾಸಗೀ ಕಾಲೇಜುಗಳು ಹೆಚ್ಚಾಗಿವೆ.

ಈ. ಹೌದು. ಅಗತ್ಯವಿದ್ದೆಡೆ ಕೊಡುವುದನ್ನು ಪರಿಶೀಲಿಸಲಾಗುವುದು 1983-84ರಲ್ಲಿ ಹಳಿಯಾಳದಲ್ಲಿ ಒಂದು ಸರ್ಕಾರಿ ಕಾಲೇಜು ಪ್ರಾರಂಭವಾಗಿದೆ. 1984-85ರಲ್ಲಿ ಸವಣೂರ ಮತ್ತು ಮುಂಡಗೋಡು ಈ ಸ್ಥಳಗಳಲ್ಲಿ ಎರಡು ಕಾಲೇಜುಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ವಿಷಯ :— ರಾಜ್ಯದಲ್ಲಿ ನೀರು ಪೂರೈಸಲು ಕೊಟ್ಟ ವಾಹನದ ಬಾಡಿಗೆ ಹಣ

ಪ್ರ. 487(1488) ಶ್ರೀ ಬಿ.ಜೆ. ಬಣಕಾರ್ (ಹಿರೇಕೆರೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ರಾಜ್ಯದಲ್ಲಿ 1981-82, 1982-83 ಮತ್ತು 1983-84ನೇ ಸಾಲಿನಲ್ಲಿ ಸಾಲುಗಳಲ್ಲಿ ನೀರಿನ ಬರಗಾಲದಲ್ಲಿ ಕುಡಿಯುವ ನೀರನ್ನು ಒದಗಿಸಲು ಬಾಡಿಗೆ ಆಧಾರದ ಮೇಲೆ ತೆಗೆದುಕೊಂಡಿರುವ ವಾಹನಗಳಿಗೆ ಕೊಟ್ಟಿರುವ ಬಾಡಿಗೆ ಹಣವೆಷ್ಟು ; (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು) ;

ಆ. ಈ ಸಾಲುಗಳಲ್ಲಿ ಎಷ್ಟು ಹಳ್ಳಿಗಳಿಗೆ ವಾಹನಗಳ ಮುಖಾಂತರ ಕುಡಿಯುವ ನೀರನ್ನು ಪೂರೈಸಲಾಗಿದೆ (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ;

ಇ. ಎಷ್ಟು ಸರ್ಕಾರಿ ವಾಹನಗಳಲ್ಲಿ ನೀರನ್ನು ಪೂರೈಸಲಾಗಿದೆ ಹಾಗೂ ಈ ವಾಹನಗಳಿಗೆ ಬಾಡಿಗೆಯನ್ನು ಕೊಡಲಾಗಿದೆಯೆ ? (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು) ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

ಅ. ಸಾರ್ವಜನಿಕ ಆರೋಗ್ಯ ಇಂಜನಿಯರಿಂಗ್ ಇಲಾಖೆಯ ವ್ಯಾಪ್ತಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಮಾತ್ರ ಕುಡಿಯುವ ನೀರನ್ನೊದಗಿಸಲು ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ತೆಗೆದುಕೊಳ್ಳಲಾಗಿದೆ ಅಂತಹ ವಾಹನಗಳಿಗೆ ಕೊಟ್ಟಿರುವ ಹಣವು ಈ ಕೆಳಕಂಡಂತಿವೆ :–

1981–82ನೇ ಸಾಲಿನಲ್ಲಿ	ರೂ.	80,459
1982—83ನೇ ,,	ರೂ.	2,41,813
1983—84ನೇ ,,	ರೂ.	—
ಒಟ್ಟು	ರೂ.	3,22,272

ಆ. 1981—82ನೇ ಸಾಲಿನಲ್ಲಿ 27 ಹಳ್ಳಿಗಳು
1982—83ನೇ ಸಾಲಿನಲ್ಲಿ 16 ಹಳ್ಳಿಗಳು

ಇ. 1981—82ರಲ್ಲಿ 17 ಸರ್ಕಾರಿ ವಾಹನವನ್ನು
ಮತ್ತು
1982—83ರಲ್ಲಿ 6 ಸರ್ಕಾರಿ ವಾಹನಗಳಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗಿದೆ. ಈ ವಾಹನಗಳಿಗೆ ಬಾಡಿಗೆಯನ್ನು ಕೊಟ್ಟಿರುವುದಿಲ್ಲ.

ವಿಷಯ ;— ವಯಸ್ಕರ ಶಿಕ್ಷಣ ಯೋಜನೆಯ ಮೇರೆಗೆ ಕೊಲಾರ ಜಿಲ್ಲೆಗೆ ಮಂಜೂರ್ಮಾಡಲಾದ ಅನುದಾನ

ಪ್ರ. ಸಂಖ್ಯೆ 488(1485) ಶ್ರೀ ಎ. ನಾಗರಾಜ್ (ಮಲೂರು). —ಮಾನ್ಯ ವಿದ್ಯಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಮಲೂರು ತಾಲ್ಲೂಕಿನಲ್ಲಿ ಕಟ್ಟಡಗಳಿಲ್ಲದ ಪ್ರಾಥಮಿಕ, ಉನ್ನತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳ ಸಂಖ್ಯೆ ಎಷ್ಟು ;

ಆ, ಅಂತಹ ಶಾಲೆಗಳಿಗೆ ಕಟ್ಟಡಗಳನ್ನು ಒದಗಿಸಲು ಕೈಕೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ವಿದ್ಯಾ ಸಚಿವರು) :—

ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಗಳು.	ಪ್ರೌಢ ಶಿಕ್ಷಣ ಶಾಲೆಗಳು
32	4

ಆ. ಹಂತ ಹಂತವಾಗಿ ಕಟ್ಟಡಗಳನ್ನು ಒದಗಿಸಲು ಕ್ರಮ ಕೈಕೊಳ್ಳಲಾಗುತ್ತಿದೆ.

Mr. Speaker.—Now, Papers to be laid on the Table of the House.

Papers Laid on The Table

Sri A. Lakshmisagar (Minister for Law & Parliamentary, Housing and Public Grievances).—Sir on behalf of the Minister for Social Welfare and Sericulture, I beg to lay ;

"Notification No. CI 121 SLK 80 dated 7th March, 1984 Amendment to the Karnataka Silk Work Seed, Cocoon and Silk Yarn (Regulation of Production, Supply, Distribution and Sale) Rules, 1960 ;

as required under Section 18 (3) of the Karnataka Silk Worm Seed, Cocoon and Silk Yarn (Regulation of Production, Supply, Distribution and Sale) Act, 1959".